At Ranjit
From 5-7-46
Bahoo Betiyan
ಕರಣದಿವ್ಯಾ — ನಿರ್ಮಲ
ಯೂಕೂಬ — ಪಾತ್ರವಹಿಸಿರುವ
ಬಹು - ಬೇಟಿಯೆ

Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 235 | ಶನಿವಾರ 6—7—46 | ಬಿಡಿ ಪ್ರತಿ 3 ಪೈ

At Opera
2 nd Glorious Week
Cobra Woman
6—7—46 ರಿಂದ
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು)

ಎಲ್ಲಾ ಕೃತ್ಯಕ್ಕೂ ಹಿಟ್ಲರೇ ಜವಾಬ್ದಾರನು!

ಹಿಟ್ಲರ್ ಜವಾಬ್ದಾರಿ

ನೂರೆಂಬರ್ಗ್ ಜುಲೈ 4 — ಯುದ್ಧ ಪಾತಕಿಗಳ ಪರ ವಾದದಲ್ಲಿ ಅವರ ವಕೀಲರು ಯುದ್ಧದ ಎಲ್ಲ ಕೃತ್ಯಗಳಿಗೂ ಹಿಟ್ಲರನೇ ಪೂರ್ಣ ಜವಾಬ್ದಾರನೆಂದು ತಿಳಿಸಿದರು.

ಮಹಾ ಶಾಂತಿ ಸಮ್ಮೇಳನ

ಪ್ಯಾರಿಸ್ ಜು 4— ಇಟಲಿ ಸಂಬಂಧದ ಎಲ್ಲ ಪ್ರಶ್ನೆಗಳೂ ವಿದೇಶಾಂಗ ಮಂತ್ರಿ ಸಮ್ಮೇಳನದಲ್ಲಿ ಇತ್ಯರ್ಥವಾಗಿದೆ. 21 ರಾಷ್ಟ್ರಗಳ ಮಹಾ ಶಾಂತಿ ಸಮ್ಮೇಳನವು ಜುಲೈ 29 ರಲ್ಲಿ ನಡೆಯುವಂತೆ ತೀರ್ಮಾನವಾಗಿದೆ.

ಸಚಿವರು ಡಿಸ್ಮಿಸ್ ಗಿರಿಯಾದರು

ಟೆಹರಾನ್ ಜು 4— ಮುಖ್ಯ ಮಂತ್ರಿಯು ಆಜ್ಞೆಯಂತೆ ಕೈಗಾರಿಕಾ ಮಂತ್ರಿಯು ಡಿಸ್ಮಿಸ್ ಮಾಡಲ್ಪಟ್ಟಿರುವರು. ಕಾರಣ ಹೊರಪಟ್ಟಿಲ್ಲ.

ಸರ್ ಮಿರ್ಜಾ

ಹೈದರಾಬಾದು ಜುಲೈ 3 — ಹೈದರಾಬಾದಿನ ಮುಖ್ಯ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ಸರ್ ಮಿರ್ಜಾರ ವಿಷಯದಲ್ಲಿ ಪ್ರಶಂಸನೆ ವ್ಯಕ್ತಪಡಿಸಿ, ಡಾ|| ವಂಜಿಯವರು ಹೈದ್ರಾಬಾದು ಪ್ರಜೆಗಳಿಗೆ ಒಳ್ಳೆ ಭವಿಷ್ಯ ವಿರುವುದೆಂದಿರುವರು.

ಲಾರ್ಡ್ಸ್‌ನಲ್ಲಿ ಭಾರತ ಚರ್ಚೆ

ಲಂಡನ್ ಜುಲೈ 4 — ಇದೇ ತಾ|| 15 ರಲ್ಲಿ ಲಾರ್ಡ್ಸ್ ಸಭೆಯಲ್ಲಿ ಭಾರತದ ಪೆಸ್ಥಿತಿ ಚರ್ಚೆ ನಡೆಯುವುದು. ಕಾಮನ್ಸ್ ಸಭೆಯಲ್ಲಿ ನಡೆಯುವ ಭಾರತದ ಮೇಲಿನ ಚರ್ಚೆಗೆ ಎರಡು ದಿನಗಳು ಬೇಕೆಂದು ಚರ್ಚಿಲ್ ಅಪೇಕ್ಷಿಸಿದ್ದಾರೆ.

ಮೈಸೂರು— ಜುಲೈ 11ರಲ್ಲಿ ನಡೆಯಬಹುದೆಂದ ಅಂಚೆ ಮುಷ್ಕರದಲ್ಲಿ ಮೈಸೂರು ಡಿವಿಜನ್ ಅಂಚೇ ನೌಕರರು ಭಾಗವಹಿಸಕೂಡದೆಂದು ನಿರ್ಧರಿಸಿರುವರು.

ನ್ಯೂಯಾರ್ಕ್ ಜುಲೈ 5 — ಹಿರೋಷಿಮಾ ಮತ್ತು ನಾಗಸಾಕಿಯಲ್ಲಿ ಹಾಕಿದ ಅಣುಬಾಂಬಿನಿಂದ 320000 ಸಾವು ನೋವಾಯಿತೆಂದೂ ಈಗ ತಿಳಿಯಬಂದಿದೆ.

ಆರೋಪಣೆ ಇದ್ದರೆ ಅಧಿಕಾರಿಗಳಿಗೆ ವರ್ಗವಿಲ್ಲ ಆರೋಪಣೆ ರುಜುವಾತಾದರೆ ಶಿಕ್ಷೆ ಉಂಟು

ನ್ಯಾಯವಿಧಾಯಕ ಸಭೆ

[ಹಿಂದಿನ ಪುಟದಿಂದ]

ಉ (ಶ್ರೀ ಪುಲ್ಲಾರೆಡ್ಡಿ) — ಶ್ರೀಮತಿ ಲಕ್ಷ್ಮಮ್ಮನವರಿಂದಲೇ ಒಂದು ದೂರು ಬಂದಿತ್ತು. ದೇಶಬಂಧುವಿನಲ್ಲಿ ಚಿಕ್ಕಜಾಜೂರು - ಚಿತ್ರದುರ್ಗದ ರೈಲು ಸಕಾಲಕ್ಕೆ ಬರುವುದಿಲ್ಲವೆಂದು ಮತ್ತು ಸ್ತ್ರೀ ಸಮಾಜದಿಂದ ಹೆಂಗಸರ ಬಗ್ಗೆ ಪ್ರತ್ಯೇಕವಾದ ಟಿಕೀಟು ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಬಂದಿತ್ತು.

ಪ್ರ (ಗೋಪಾಲಸ್ವಾಮಯ್ಯಂಗಾರ್) — ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ವರ್ಷ ಜನವರಿಯಿಂದ ಕಾಮನ ನಿವಾರಣೋಪಾಯ ಕೈಗೊಳ್ಳಲಾಗಿದೆಯೇ ? ಖರ್ಚು ಮುಂತಾದವುಗಳೆಷ್ಟು ?

ಉ (ಶ್ರೀ ಪುಲ್ಲಾರೆಡ್ಡಿ) — ಅಂಕಿ ಅಂಶಗಳಿಂದ ಉತ್ತರವಿತ್ತರು.

ಪ್ರ (ಶ್ರೀ ರುದ್ರಪ್ಪ) — ಲಂಚವನ್ನು ನಿರ್ಮೂಲ ಮಾಡುವುದಕ್ಕೆ ಸಮಿತಿಯಿದೆಯೇ ? ಖರ್ಚು ವೆಚ್ಚಗಳು ಮತ್ತು ಸಲಹೆಗಳೇನು ? ಆ ಸಮಿತಿ ಸಾಕ್ಷಿಗಳಿಗೆ ರಕ್ಷಣೆ ಕೊಡುವುದೇ ?

ಉ (ಶ್ರೀ ಶೇಷಾದ್ರಿ) — ರೂ. 6009-9-0 ಖರ್ಚಾಗಿದೆ.

ಮೈಸೂರು ಜಿಲ್ಲಾಧಿಕಾರಿಗಳನ್ನು ವರ್ಗಾಯಿಸಬೇಕೆಂದು ದೂರು ಬಂದಿರುವ ವಿಷಯ ಗೊತ್ತಿಲ್ಲ. ಸಾಮಾನ್ಯವಾಗಿ 3 ವರ್ಷಕ್ಕೊಮ್ಮೆ ಅಧಿಕಾರಿಗಳನ್ನು ವರ್ಗ ಮಾಡಲಾಗುವುದು. ಅದು ಸಾರ್ವಜನಿಕ ಶ್ರೇಯಸ್ಕರ್ಯಕ್ಕಾಗಿ. ಆರೋಪಣಾ ಮಾತ್ರದಿಂದಲೇ ಅಧಿಕಾರಿಗಳನ್ನು ವರ್ಗಮಾಡುವುದಿಲ್ಲ. ಆರೋಪಣೆಗಳೇನಾದರೂ ಬಂದಲ್ಲಿ ವಿಚಾರಣೆ ಮಾಡಿ ಅಧಿಕಾರಿಗಳಿಗೆ ಸರ್ಕಾರ ಶಿಕ್ಷೆ ವಿಧಿಸುವುದು ಎಂದು ಶ್ರೀ ಶೇಷಾದ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ನಿರ್ಣಯಗಳು

ಶ್ರೀ ಕೃಷ್ಣನಾಯರ್‌ರವರು ಕೂಲಿಗಾರರ ಪರ-ಮಂಡಿಸಿದ್ದ ನಿರ್ಣಯವನ್ನು ಸದುತ್ತರ ಒರುತ್ತಲು ಹಿಂದಕ್ಕೆ ತೆಗೆದುಕೊಂಡರು.

ಮನೆ ವಸತಿ ಸೌಕರ್ಯದ ವಿಷಯದಲ್ಲಿ ಅಬ್ಬಾಸ್ ಖಾನ್ ಮಂಡಿಸಿದ್ದ ನಿರ್ಣಯವನ್ನು ಪರಸು ತೆಗೆದುಕೊಳ್ಳಲ್ಪಟ್ಟಿತು.

ಶ್ರೀ ನಾಗಯ್ಯರೆಡ್ಡಿಯವರು ಪ್ರತಿಬಂಧಕಾಜ್ಞೆಗಳ ವಿಷಯದಲ್ಲಿ ನಿರ್ಣಯಗಳನ್ನು ಮಂಡಿಸಿದರು.

ಈ ನಿರ್ಣಯದ ಪರವಾಗಿ ಕೆ. ಚೆಂಗಲರಾಯರೆಡ್ಡಿ ಗರುವಾರೆಡ್ಡಿ ಮುಂತಾದವರು ಪುಷ್ಟಿಕರಿಸಿ ಮಾತಾಡಿದರು

ಮಂತ್ರಿ ಶ್ರೀ ಓ. ಪುಲ್ಲಾರೆಡ್ಡಿ— ಪರಶುರಾಮರು ಇಲ್ಲಿ ಇದ್ದಾರೆ. ಹೀಗೆ 4 ಸಲವಾಗಿದೆ, ಮೇ 1943 ಮತ್ತು ಸೆಪ್ಟಂಬರ್ 1944 ಸೇರಿಯಿಂದ ಎಲ್ಲರನ್ನು ಬಿಟ್ಟುಬಿಟ್ಟರು 1945 ಬೌರಿಂಗ್‌ಪೇಟೆ ಗಣಿಯಿಂದ 11 ಜನರನ್ನು ಬಿಟ್ಟಿದೆ ಹಾಗೆ ಭದ್ರಾವತಿ 16 ಜನರನ್ನು ಬಿಟ್ಟರು. ನವೆಂಬರ್ 1945 ರಲ್ಲಿ 13 ಜನರನ್ನು ಹೊರಗೆ ಕಳುಹಿಸಿದ್ದದ್ದನ್ನು ರದ್ದು ಮಾಡಿದೆ ಶ್ರೀಮತಿ ಕನುಲಾದೇವಿ ಜಟ್ಟೊಸಾಥ್ಯಾಯರ ಮೇಲೆ ಇದ್ದ ಬಹಿಷ್ಕಾರವನ್ನು ತೆಗೆದು ಹಾಕಿದೆ. [ಈ ಬಗ್ಗೆ ವಿವರಿಸಿ ಹೇಳಿ ಹ್ಯಾಗ] ಸರಕಾರದ ಅತಿಥಿಯಾಗಿದ್ದ ಒಬ್ಬ ವ್ಯಕ್ತಿಯು ಸಹಾಯಕ್ಕಾಗಿ ವರ್ತಿಸಿದ್ದರಿಂದ ಅವರ ಮೇಲೂ ಜಾರಿ ಮಾಡಲ್ಪಟ್ಟಿತು.

ಸರಕಾರದವರು ಆಗಾಗ್ಗೆ ವಿಮರ್ಶಿಸುತ್ತಿದ್ದೆವೇ ಎಂದರು ಸೂಚಕರು ಹಿಂದಕ್ಕೆ ತೆಗೆದು ಕೊಂಡರು ಸಭೆಯು ನಾಳೆ 4|| ಲಿಗೆ ಮುಂದುವರಿಯಿತು.

ಮಸೂದಾ ಕಾನೂನುಗಳು ಅಂಗೀಕೃತವಾದವು.

ಶ್ರೀ ಅಪ್ಪಾಜಿಗೌಡರು

ಬೆಂಗಳೂರು ಜುಲೈ 5 — ಲಂಚ ನಿರ್ಮೂಲ ಸಮಿತಿಯವರ ವರದಿ ಅನುಸರಿಸಿ ಶ್ರೀ ಜಿ. ಅಪ್ಪಾಜಿಗೌಡರನ್ನು ಎಫಿನ್ಸಿ ಆಡಿಟ್ ಡೈರೆಕ್ಟರಾಗಿ ರೂ. 1600 ಸಂಬಳದ ಮೇಲೆ ನೇಮಿಸಲಾಗಿದೆ.

ಸರ್ವರೂ ಬಿಡಲ್ಪಟ್ಟರು

ಬಟಾವಿಯಾ ಜುಲೈ 4 — ಜಾವಾದಲ್ಲಿ ಅಪಹರಿಸಲ್ಪಟ್ಟಿದ್ದ ಇಂಡೋನೇಷಿಯಾ ನಾಯಕರೆಲ್ಲ ಬಿಡುಗಡೆಮಾಡಲ್ಪಟ್ಟಿದ್ದಾರೆ.

ಹಾಳು ಬಿದ್ದಿದೆ ಅಹ್ಮದಾಬಾದ್

ಅಹಮದಾಬಾದ್ ಜುಲೈ 4 — ಪರಿಸ್ಥಿತಿ ಉತ್ತಮಗೊಂಡಿದೆ. ಒಟ್ಟು 39 ಸಾವು 267 ನೋವೂ ಆಗಿದೆ. ಜನ ಸಂಚಾರ ಕಡಿಮೆಯಾಗಿದೆ. ರಸ್ತೆಗಳೆಲ್ಲ ಹಾಳು ಹಾಳು ಬಿದ್ದಿವೆ.

ಕಾಕರೊಡನೆ ಮಾತುಕತೆ

ಬೊಂಬಾಯಿ ಜುಲೈ 5 — ಕಾಶ್ಮೀರದ ಮುಖ್ಯ ಮಂತ್ರಿಗಳು ಶ್ರೀ ಪಲೇೋಡನೆ ಮಾತುಕತೆ ನಡೆಸಿದರು. ನೆಹರೂರವರ ಮೇಲಿನ ಪ್ರತಿಬಂಧಾಕಾಜ್ಞೆ ವಜಾ ಮಾಡಲಾಗುವುದೆಂದು ತಿಳಿಯಬಂದಿದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ

ಬೊಂಬಾಯಿ ಜು 4— ಗಾಂಧೀಜಿಯವರು ಅ. ಭಾ. ಕಾಂ. ಸಮಿತಿಗೆ ಸಲಹೆ ಕೊಡುವರೆಂದು ಹೇಳಲಾಗಿದೆ, ಪಂ || ನೆಹರೂರವರು ಗಾಂಧೀಜಿಯೊಡನೆ ತುಂಬಾ ಕಾಲ ಮಾತುಕತೆ ನಡೆಸಿದರು. ಸಭೆ ಮುಂದೆ ಮುಖ್ಯವಾಗಿ ರಾಜ್ಯಾಂಗ ಸಂಧಾನ ವಿಷಯ, ದಕ್ಷಿಣ ಆಫ್ರಿಕಾ ಸತ್ಯಾಗ್ರಹ ವಿಷಯ, ಸಿಲೋನಿನಲ್ಲಿ ಭಾರತೀಯ ಕೂಲಿಗಾರರ ಪೌರಹಕ್ಕು ವಿಷಯಗಳು ಚರ್ಚೆಗೆ ಬರಲಿವೆ. ಸಮತಾವಾದಿ ಪಕ್ಷದ ಉಗ್ರ ವಿರೋಧ ನಡೆಯಬಹುದೆಂದು ಹೇಳಲಾಗಿದೆ. ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶ ದೊರೆತಿದೆ.

ಶ್ರೀಮತಿ ಕಮಲಾದೇವಿಯರ ಮೇಲಿನ ಪ್ರತಿಬಂಧಕ ರದ್ದು

ನ್ಯಾಯವಿಧಾಯಕ ಸಭೆ

ವಿ ಬಾ.] ಬೆಂಗಳೂರು, ಜುಲೈ 5

1) ಸಂಕಾರದ ಬಿಲ್ಲುಗಳೆಲ್ಲಾ ನ್ಯಾ. ಸ. ಯಲ್ಲಿ ಇವತ್ತು ಪಾಸಾಡವು. ಕಾಂಗ್ರೆಸ್ ಪಕ್ಷದವರು ವಿರೋಧಿಸಿದರು. ಎಲ್ಲಾ ಬಿಲ್ಲುಗಳನ್ನು.

2] ನ್ಯಾ ಸ. 12 ಕ್ಕೆ ಪ್ರಾರಂಭವಾಗಿ 4‖ ಗೆ ನಾಳೆ ಆಹಾರ ವಿಚಾರ ಚರ್ಚಿಸುವುದಕ್ಕೆ ಮುಂದವರಿಸಲ್ಪಟ್ಟಿತು.

16 ನೇ ದಿನ ಶುಕ್ರವಾರದ ನ್ಯಾ. ಸ. 12 ಕ್ಕೆ ಶ್ರೀ ರಾ. ಮಂತ್ರಿ ಪ್ರ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಪ್ರಶ್ನೋತ್ತರಗಳು

ಪ್ರ — ಶ್ರೀಮತಿ ಕಮಲಾದೇವಿ (ಕಾಂ) ಇವರು ಮೇಜರ್ ಕೆರೆಗಳ ಕೆಳಗೆ ಎಷ್ಟು ಕಡೆ ವ್ಯವಸಾಯಕ್ಕೆ ಅನುಕೂಲವಾಗಿದೆ, ಎಂದು ಪ್ರಶ್ನಿಸಿದರು.

ಉ — ಮಂತ್ರಿ ಶ್ರೀ ಯಲ್ ಸಿದ್ದಪ್ಪನವರು ಅಂಕಿ ಅಂಶಗಳಿಂದ ಉತ್ತರ ಕೊಟ್ಟರು.

ಪ್ರ — ಎಚ್. ಸಿ. ನಾಗಯ್ಯರೆಡ್ಡಿ (ಕ್ಷೋಲ್ಲಾರ. ಕಾಂ) ಕೋಲಾರದ ಟೌನಲ್ಲಿರುವ ಕೈಗಾರಿಕೆಯ ಪಾಠಶಾಲೆಗೆ ಸಂಕಾರದವರು ಗ್ರಾಂಟನ್ನು ಕೊಟ್ಟಿದ್ದಾರೆಯೇ ? ಮೆಥಾಡಿಸ್ಟ್ ವಿದ್ಯಾ ವಿ. ರ್ಷರು ಕೈಗಾರಿಕೆ ಪಾಠಶಾಲೆಗೆ ಗ್ರಾಂಟನ್ನು ವರುಷಕ್ಕೆ ಕೊಟ್ಟಿರುತ್ತಾರೆಯೇ ಎಷ್ಟು ಎಂದು ಪ್ರಶ್ನಿಸಿದರು.

ಉ — (ಮಂತ್ರಿ) ಶ್ರೀ ಯಲ್. ಸಿದ್ದಪ್ಪ ಎಲ್ಲಾ ಜುಲೈ 1. ತಾರೀಖು 1891 ಇಸ್ವಿಯಿಂದ ನಾರಮಲ್ ಮತ್ತು ಶಿಕ್ಷಣಾ ಕಲಾ ನಡೆಸುತ್ತಾರೆ. ಇದಕ್ಕೆ ಪ್ರತಿತಿಂಗಳು ಗ್ರಾಂಟು 25 ರೂ ವತ್ತು ವಿದ್ಯಾರ್ಥಿ ವೇತನ ರೂ. 25 ಸಲ್ಲುತ್ತಿತ್ತು. 1912 ರವರೆಗೆ 1913 ಜುಲೈ ತಾ‖ 1 ರಿಂದ ಗ್ರಾಂಟು 110 ರೂ ಮತ್ತು ರೂ. 25 ಸಲ್ಲುತ್ತಿದೆ.

ಪ್ರ — ಶ್ರೀ ಕಡಿದಾಳ ಮಂಜಪ್ಪ ಒಂದೇ ಸ್ಥಳದಲ್ಲಿ ಸರಕಾರದ ಅಧಿಕಾರಿಗಳು ಎಷ್ಟು ವರ್ಷಗಳು ವರ್ಗವಿಲ್ಲದೆ ಇರಬಹುದು. ಬಿ. ಹೀಗೆ ಎಷ್ಟು ಜನ ಅಧಿಕಾರಿಗಳು ಗೆಜಿಟಡ್ ಮತ್ತು ಇತರರು ಇದ್ದಾರೆಂದು ಪ್ರಶ್ನಿಶಿದರು.

ಉ — ರಾ. ಪ್ರ. ಆರ್ ಶೇಷಾದ್ರಿಗಳು ಹಾಗೆ ಕಡ್ಡಾಯವಾಗಿ ಏನೂ ಇಲ್ಲಾ ಅಮಲ್ದಾರು ಮತ್ತು ಅಸಿಸ್ಟೆಂಟು ಕಮೀಷ್ನರುಗಳ ಬಗ್ಗೆ ಮಾತ್ರ ಇದೆ ಎಂದರು.

ಪ್ರ — ಶ್ರೀಮತಿ ಲಕ್ಷ್ಮಮ್ಮ (ಕಾಂ) ಪ್ರಜೆಗಳಿಂದ ದೂರವಾಗಲೀ ಮತ್ತು ಸಲಹೆಗಳಾಗಲೀ ಮೈಸೂರು ರೈಲ್ವೆ ಅಧಿಕಾರಿಗಳಿಗೆ ಬಂದಿದೆಯೇ ರೈಲು. ಹೊಡಡುವ ಕಾಲಗಳನ್ನು ಬದಲಾಯಿಸುವ ಬಗ್ಗೆ ಹೆಂಗಸರಿಗಾಗಿ ಪ್ರತ್ಯೇಕ ಬೋಗಿಗಳನ್ನು ಏರ್ಪಡಿಸಬೇಕು.

ಎಲ್ಲಾ ರೈಲ್ವೆ ನಿಲ್ದಾಣಗಳಲ್ಲೂ ನೀರಿನ ನಲ್ಲಿಯನ್ನು ಏರ್ಪಾಡು ಮಾಡಬೇಕು. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಸ್ತ್ರೀಯರಿಗೇ ಪ್ರತ್ಯೇಕವಾಗಿ ಟಿಕೀಟು ದೊರೆಯುವ ಏರ್ಪಾಡು ಮಾಡಬೇಕು ಎಂಬುದಾಗಿ ಪ್ರಶ್ನೆ ಮಾಡಿದರು.

— ಮೊದಲನೆ ಪುಟ ನೋಡಿ

STUDENTS !

Are you despairful of the forthcoming September Examinations ? Here is good news for you. An English Honours Graduate with wide experience of books and journalistic experience undertakes to prepare first-rate Essays on English Texts prescribed for the Intermediate, B. A., and B. Sc., classes. Excellent service for moderate charges.

Apply to— Rao,
2180 Woodyard
Chamundi Extension, Mysore

ಅಶೋಕಾ ಫಾರ್ಮೆಸಿ
ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು
ಶಾಸ್ತ್ರೀಯ ಮತ್ತು ಅನುಭವಸಿದ್ಧವಾದ ಔಷಧಗಳು ದೊರೆಯುತ್ತದೆ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College, Kotgarh, Simla

No. H 3 P R 48 / 45-46

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ 1946–47 ನೇ ಸಾಲಿನಲ್ಲಿ ನಡೆಸುವ ಈ ಮುನಿಸಿಪಾಲಿಟಿ ಆರೋಗ್ಯ ಶಾಖೆಯ ಆಡಳಿತಕ್ಕೆ ಒಳಪಟ್ಟ ಎಲ್ಲಾ ವಿಧವಾದ ಕಸಬುಗಳಿಗೆ ಅಗತ್ಯವಾದ ಲೈಸನ್ಸನ್ನು ಸಕಾಲದಲ್ಲಿ ಪಡೆದು ಅನಂತರ ಆಯಾಯ ಕಸಬುಗಳನ್ನು ಜಾರಿಯಲ್ಲಿ ತರತಕ್ಕದ್ದು.

ಹಾಗೆ ಲೈಸನ್ಸನ್ನು ಅಪೇಕ್ಷಿಸುವ ಕಸಬುದಾರರು ತಮ್ಮ ಹೆಸರು, ವಿಳಾಸ ಕಸುಬಿನ ವಿವರ, ನಡೆಸುವ ಸ್ಥಳ, ಮುಂತಾದ ತಪಶೀಲುಗಳೊಡನೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ವಿಧಾಯಕವಾದ ಫೀಜು ಪಾವತಿಯಿಂದ ಲೈಸನ್ಸು ಪಡೆಯತಕ್ಕದ್ದು. ಹಾಗೆ ಲೈಸನ್ಸು ಪಡೆಯದೆ ಕಸಬುಗಳನ್ನು ನಡೆಸುವವರ ಮೇಲೆ ಕಾನೂನು ಪ್ರಕಾರ ಕ್ರಮನಡೆಸಲಾಗುವುದು.

ತಾ ‖ 25–6–46 (ಸಹಿ) ಆರ್. ರಾಮಚಂದ್ರರಾವ್ ಬೊಂಬೋರೆ
ಮೈಸೂರು ಪ್ರೆಸಿಡೆಂಟ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧವಿದ್ದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಿಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪೫ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.